ಬಂದು ಹೋಗುವ ಮನಕೊಡು ಅವನಿಗೆ ತಾಯೆ' ಎಂದು ಪ್ರಾರ್ಥಿಸಿದೆ. ನವಮೀಚಂದಿರ ಸಹಜ ನಗೆಗಿಂತ ಭಿನ್ನವಾಗಿ ನಗುತಿರುವಂತೆ ಕಂಡ. ಆ ನಗೆಯ ಮರ್ಮವರಿಯಲು ಹೆಣಗಿದೆ. ಕರಿಮುಗಿಲು ಅವನನ್ನು ಕವಿಯಿತು.

ಹಾಲು ಹಿಂಡುವಾಗ ಉಕ್ಕುತ್ತಿದ್ದ ಬೆಳ್ನೊರೆ ರಾತ್ರಿ ನಕ್ಕ ಚಂದಿರನ ನಗೆಯಂತೆ ಕಂಡಿತು. ನಗೆ ಏಕೆಂದೆ. ಹಾಲಿನ ಧಾರೆ ಆ ನಗೆಯನ್ನು ಇನ್ನಷ್ಟು ಹೆಚ್ಚಿಸಿತು. ಕೋಪ ಬಂತು. ಹಿಂಡುವುದನ್ನು ನಿಲ್ಲಿಸಿ, ಕುಡಿಯಲು ಕರುವನ್ನು ಬಿಟ್ಟೆ. ಅಮ್ಮ, 'ಏನಾಗಿದೆ ನಿನಗೆ? ಸರಿಯಾಗಿ ಹಾಲು ಕರೆಯದೆ ಕರುವಿಗೆ ಬಿಟ್ಟು ಬಂದಿರುವೆ' ಎಂದಳು. ನಾನು ಮರುಮಾತಾಡಲಿಲ್ಲ.

ಅಮ್ಮನ ಬದಲು ಅವನು ಇದ್ದಿದ್ದರೆ ಎದೆಗೆ ಚೆನ್ನಾಗಿ ಗುದ್ದಬಹುದಿತ್ತು ಅನ್ನಿಸಿತು. ಆಗಲೂ ನನಗೇ ನೋವು, ಅವನಿಗಲ್ಲ. ನನ್ನನ್ನು ಅಸಹಾಯಕತೆಗೆ ದೂಡುವುದರಲ್ಲಿ ಅವನು ನಿಸ್ಸೀಮ.

★★★

ರಥಚಕ್ರದ ಸದ್ದು ಒಂಟಿಯಾಗಿದ್ದಾಗಲೆಲ್ಲ ಕೇಳಿಸುತ್ತದೆ. ಆ ನವಿಲುಗರಿ ಕಾಣಿಸುತ್ತದೆ. ಎಲ್ಲಿಂದಲೋ ಕೇಳಿಸುವ ಕೊಳಲುಲಿ. ಹುಡುಕಿಗೆ ಮನದಲ್ಲೇ ಸಿಕ್ಕಿಬಿಡುತ್ತದೆ. ಮಾಯೆಯನ್ನು ಗೆಲ್ಲಬೇಕು ಅನ್ನುತ್ತಿದ್ದವನೇ ಗೆಲ್ಲಲಾಗದ ಮಾಯೆಯಲ್ಲಿ ಸಿಲುಕಿಸಿದ್ದಾನೆ! ಯಾವುದು ಮಾಯೆ? ಅವನೆ? ನಾನೆ? ನಮ್ಮೊಲವೆ? ನನ್ನೊಲವೆ? ಅವನೂ ಸೇರಿದಂತೆ ಇಡೀ ಜಗವೆ? ಕೇಳಬೇಕೆಂದುಕೊಂಡಾಗಲೆಲ್ಲಾ ನೋಡು ಗೋವರ್ಧನಗಿರಿ ಹಸುಗಳಿಗೆ ಎಷ್ಟೊಂದು ಮೇವು ಕೊಡುತ್ತಿದೆ. ಅದರ ಕಾಡು ನಮಗೆ ಏನೆಲ್ಲ ಕೊಡುವುದು. ಕಡಿದ ದಿನ ಯಾರಿಗೂ ಕಷ್ಟ ತಪ್ಪದು. ಯಮುನೆಯನ್ನು ನೋಡುತ್ತಿರುವೆಯ? ಅವಳು ನಿತ್ಯ ತಪಸ್ವಿನಿ. ಅದು ಜಗತ್ತಿಗಾಗಿ. ಅದು ಮುಗಿಯದು. ಮುಗಿದ ದಿವಸ ಜಗದ ಮೃತ್ಯು. ಹೀಗೆ ಹೇಳುವುದರಲ್ಲಿಯೇ ನನ್ನನ್ನು ಎತ್ತೆತ್ತಲೋ ಅಲೆಸಿ ಮಾತು ಎದೆಯಲ್ಲೆ ಉಳಿಯುವಂತೆ ಮಾಡುತ್ತಿದ್ದ. ಈಗಂತೂ ಕೇಳುವಂತೆಯೆ ಇಲ್ಲ. ನಾನೇ ತಿಳಿದುಕೊಳ್ಳಲೆಂಬ ತಂತ್ರವಾಗಿತ್ತೆ ಅವನದು? ಕಂಡುಕೊಳ್ಳದೆ ಇರಲಾರೆ, ಇಂದಲ್ಲ ನಾಳೆ. ಆಗ ಅವನೆಲ್ಲಿದ್ದರೂ ಹೇಳಿಯೇ ತೀರುತ್ತೇನೆ.

ಅಂದು ಕಾರ್ತೀಕದ ಬಾಲಹುಣ್ಣಿಮೆ (ಹುಣ್ಣಿಮೆಯ ಹಿಂದಿನ ದಿನ). ಗಗನ ಮೇಘ ರಹಿತವಾಗಿತ್ತು. ಇಂಥ ದಿನಗಳಲ್ಲಿ ಅವನು ಸೊಂಟದಿಂದ ಕೊಳಲು ತೆಗೆಯದೆ, ಶಿಳ್ಳೆಯಲ್ಲಿಯೇ ನುಡಿಯುತಿದ್ದ ಹಾಡುಗಳಲ್ಲಿ ಈ ಹಾಡು ಥಟ್ಟನೆ ನೆನಪಾಯಿತು,

ಗಿರಿಗಳಲಿ ಹಸಿರು ವೀಣೆ ಮಿಡಿದವಳೆ
ಝರಿಗಳಲಿ ಧವಳ ಗೀತ ನುಡಿದವಳೆ
ಜಗದ ಹಸಿವೆ ನೀಗಿ ತಾಯಿ ಆದವಳೆ
ತಾಯೆ ನಿನಗೆ ತಲೆಯ ಬಾಗಿ ನಮಿಸುವೆ

ಮಡಿಲು ತೆರೆದು ಕರೆವ ನಿನ್ನ ತೊಡೆಯ
ಮೇಲೆ ತಲೆಯ ಇಡುವೆ ಹಾಡು ಜೋಗುಳ
ದೇವ ಅಸುರ ಸಕಲ ನಿನಗೆ ಕಂದರು
ಹರಸಿ ಹಾಡುವವಳು ನೀನು ಮಂಗಳ

ನಿನ್ನ ನಲುಮೆ ಮಡಿಲು ಮಾಯೆಯಲ್ಲ ತಾಯೆ
ನಲುಮೆ ಒಲುಮೆ ಸಿರಿಯ ನಾಕ ನೀನೆ...